**ಸಾಕ್ಷಿಯನ್ನು ದಿಃ 15.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಜಿ ಎನ್ ಆರ್. ವಕೀಲರಿಂದಃ**

1. ಪಲ್ಲವಿ ಮೊದಲು ನನ್ನ ಹೆಂಡತಿ ಆಗಿದ್ದರು. ನಮ್ಮಿಬ್ಬರು ನಡುವೆ ವಿಚ್ಛೇದನ ಆಗಿರುತ್ತದೆ. ಪಲ್ಲವಿಯವರ ತಂದೆ ತಾಯಿ ಮದುವೆ ಸಮಯದಲ್ಲಿ 150 ಗ್ರಾಂ ಒಡವೆ 1,50,000/- ನಗದು ಮತ್ತು ಒಂದು ಬೈಕನ್ನು ವರದಕ್ಷಿಣೆಯಾಗಿ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು ಪಲ್ಲವಿಯವರ ದಾಂಪತ್ಯದಿಂದ ಖುಷಿ ಮತ್ತು ಚಿರಂತ್ ಎಂಬ ಇಬ್ಬರು ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿ. ಇಬ್ಬರು ಮಕ್ಕಳು ಪಲ್ಲವಿಯವರ ಜೊತೆಯಲ್ಲಿ ವಾಸವಿದ್ದಾರೆ. ಸುಮಾರು 8 ವರ್ಷಗಳಿಂದ ನನ್ನ ಮಕ್ಕಳು ನನ್ನಿಂದ ದೂರವಿದ್ದಾರೆ.

2. ವಾದಿಯರು ಜೀವನ ನಡೆಸಲು ಯಾವುದೇ ಜೀವನಾಂಶ ನೀಡಿಲ್ಲ. ನಾನು ಅರಸೀಕೆರೆಯ ಪೂಜಾ ರವರೊಂದಿಗೆ ಸಲಿಗೆಯಿಂದ ನಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಪೂಜಾ ರವರನ್ನು ನಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ವಿನಾಃಕಾರಣ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಈ ಸಂಬಂಧ ಶ್ರವಣಬೆಳಗೊಳ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿ ಸುಳ್ಳು ದೂರು ನೀಡಿದ್ದರು ಎನ್ನುತ್ತಾರೆ.

3. ನನ್ನ ಮತ್ತು ಪಲ್ಲವಿ ನಡುವೆ ಹಲವು ಬಾರಿ ಹಿರಿಯರ ಸಮ್ಮುಖ ರಾಜಿ ಪಂಚಾಯತಿ ನಡೆದಿರುತ್ತದೆ ಎಂದರೆ ಸರಿಯಲ್ಲ. ನನಗೆ ಬುದ್ದಿವಾದ ಹೇಳಿದ್ದರು ನಾನೇ ತಿದ್ದಿಕೊಂಡಿಲ್ಲ ಎಂದರೆ ಸರಿಯಲ್ಲ. ದೂರು ನೀಡಿದ ಸಂಬಂಧ ನಾನು ಜೈಲಿಗೆ ಹೋಗಿ ಬಂದಿರುತ್ತೇನೆ ಎಂದರೆ ಸರಿ. ನಾನು 3ನೇ ವಾದಿಗೆ ಹೊಡೆದು ಹಲ್ಲು ಮುರಿದಿದ್ದರಿಂದ ದೂರು ದಾಖಲಾಗಿ ಜೈಲಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ಈಗ ವಾದಿಯರು 3ನೇ ವಾದಿಯ ತಂದೆಯ ಮನೆಯಲ್ಲಿ ವಾಸವಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ಇಬ್ಬರು ಮಕ್ಕಳು ಈಗ ಏನು ಓದುತ್ತಿದ್ದಾರೆ ಎಂದು ಗೊತ್ತಿಲ್ಲ. ಅವರು ವಿಧ್ಯಾಭ್ಯಾಸ ಮತ್ತು ಜೀವನಾಂಶಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರ ಎಂದರೆ ಸಾಕ್ಷಿ ಅವರು ಕೇಳಿಲ್ಲ ನಾನು ಮಾಡಿಲ್ಲ ಎಂದು ಹೇಳುತ್ತಾರೆ.

4. ನಮ್ಮ ಕುಟುಂಬಕ್ಕೆ ಒಟ್ಟು 4 ಎಕರೆ ವಿಸ್ತೀರ್ಣದ ಜಮೀನು ಇದೆ. ಅದು ನೀರಾವರಿ ಜಮೀನು ಎಂದರೆ ಸರಿ. ಸದರಿ ಜಮೀನಿನಲ್ಲಿ ಸುಮಾರು 150 ತೆಂಗಿನ ಮರಗಳು ಇವೆ. ಉಳಿದಂತೆ ಯಾವುದೇ ಬೆಳಗಳು ಬೆಳೆದಿಲ್ಲ. ಸದರಿ ಜಮೀನಿನಲ್ಲಿ ವಾರ್ಷಿಕ 50,000/- ಆದಾಯ ಬರಬಹುದು. ಸದರಿ ಜಮೀನಿನಿಂದ ತಿಂಗಳಿಗೆ ಸುಮಾರು 15,000/- ಆದಾಯ ಬರುತ್ತದೆ ಎಂದರೆ ಸರಿಯಲ್ಲ. ನನಗೆ ವಾರ್ಷಿಕ 10,00,000/- ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಮರಗಳಿಂದ ವರ್ಷಕ್ಕೆ ಸುಮಾರು 4,000 ತೆಂಗಿನ ಕಾಯಿ ಸಿಗುತ್ತವೆ. ಸದರಿ ಮರಗಳಿಂದ 30 ರಿಂದ 35 ಸಾವಿರ ತೆಂಗಿನ ಕಾಯಿ ಬೀಳುತ್ತವೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಬಾಳೆ, ಶುಂಠಿ, ಜೋಳ ಮತ್ತು ತರಕಾರಿ ಬೆಳೆಯುತ್ತೇವೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತಾಗಿದೆ. ವಾದಿಯರಿಗೆ ತಿಂಗಳಿಗೆ ತಲಾ 10,000/- ರೂ ನೀಡಲು ಬಾಧೀನರಾಗಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 7/2020 ರಲ್ಲಿ ವಾದಿಯರನ್ನು ಸಹ ಪಕ್ಷಗಾರರನ್ನಾಗಿ ಮಾಡಲಾಗಿರುತ್ತದೆ. ಈ ಸಂಬಂಧ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ನೀಡಿಲ್ಲ. ವಾದಿಯರಿಗೆ ಬರಬೇಕಾದ ಭಾಗಂಶವನ್ನು ತಪ್ಪಿಸುವ ಉದ್ದೇಶದಿಂದ ನಾನು ಮತ್ತು ನನ್ನ ಅಕ್ಕಂದಿರು ಶಾಮಿಲಾಗಿ ಸದರಿ ಅಸಲು ದಾವಾ ಸಂಖ್ಯೆ 7/2020 ನ್ನು ಹೂಡಿದ್ದೆವೆ ಎಂದರೆ ಸರಿಯಲ್ಲ. ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಫೋಟೋಗಳನ್ನು ನ್ಯಾಯಲಯಕ್ಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ವಿಚ್ಚೇದನಲ್ಲಿ ವಾದಿಯರಿಗೆ ಯಾವುದೇ ಜೀವನಾಂಶವನ್ನು ನೀಡಿರುವುದಿಲ್ಲ. ವಾದಿಯರಿಗೆ ಜೀವನಾಂಶ ನೀಡಬೇಕಾಗುತ್ತದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**